# ಚೂಟಿಯ ಆಪರೇಶನ್ ಪರ್ವ!



ಶಸ್ತ್ರಚಿಕಿತ್ಸೆ ನಂತರ ಬ್ಯಾಂಡೇಜ್ ಬಂಧನದಲ್ಲಿ

■ ಟಿ.ಪಿ. ಶರಧಿ

ನಮ್ಮ 'ಚೂಟಿ' ಬೆಕ್ಕಿನ ಹೊಟ್ಟೆಯ ಭಾಗದಲ್ಲೊಂದು ಗಂಟು (ಟ್ಯೂಮರ್) ಕಳೆದ ಒಂದೆರಡು ವರ್ಷಗಳಿಂದ ಇತ್ತು. ಅದಾಗೇ ಕರಗುತ್ತದೆ ಎಂದು ಸುಮ್ಮನಿದ್ದೆವು. ಈಚೆಗೆ ಚೂಟಿ ಡೇಟಿಂಗ್‌ಗೆ ಹೋದಾಗಲೋ, ಅಥವಾ ಯಾವುದೋ ಬೆಕ್ಕಿನೊಂದಿಗೆ ಜಗಳವಾಡುವಾಗಲೋ ಆ ಗಂಟು ಓಪನ್ ಆಯಿತು.

ಗಾಯ ನಂಜಾಗಿ, ರಣವಾಗಿ ಮಾರಣಾಂತಿಕವಾದೀತು ಎಂಬ ಗಾಬರಿಯಿಂದ ವೈದ್ಯರ ತಲಾಶ್ ನಡೆಸಿದಾಗ ಸಿಕ್ಕಿದ್ದು ತುಮಕೂರಿನ ಡಾ. ವಿಶ್ವನಾಥ್ ಅವರ ಸಂಪರ್ಕ. ಚೂಟಿಯನ್ನು ಕಾರಿನಲ್ಲಿ ಬೆಂಗಳೂರಿನಿಂದ ತುಮಕೂರಿಗೆ ಕರೆದೊಯ್ದೆವು.

ಚೂಟಿಯ ಪೇಚಾಟ, ಕೂಗಾಟದ ನಡುವೆಯೇ ಆಸ್ಪತ್ರೆ ತಲುಪಿದೆವು. ಚೂಟಿಯ ಗಂಟು ನೋಡಿ ಡಾಕ್ಟರ್ ಸಹ ದಂಗಾದರು. ಇಷ್ಟು ದೊಡ್ಡ ಗಂಟನ್ನು ನಾನು ನಿರೀಕ್ಷಿಸಿರಲಿಲ್ಲ ಎಂದವರು ಸರ್ಜರಿಗೆ ಮುಂದಾದರು. ದುರದೃಷ್ಟವಶಾತ್ ಅವರ ಸಹಾಯಕ ಅವತ್ತೇ ಕೈಕೊಟ್ಟ ಕಾರಣ, ಅಪ್ಪ–ಅಮ್ಮ ಸರ್ಜರಿಗೆ ಸಹಕರಿಸಬೇಕಾಯ್ತು. ಚೂಟಿಗೆ ಅರಿವಳಿಕೆ ನೀಡಿದರು. ಮೆಡಿಕಲ್ ಓದಿ ಸರ್ಜರಿ ಮಾಡಬೇಕೆಂಬ ಅಪ್ಪನ ಕನಸು ನೆರವೇರಿರಲಿಲ್ಲವಾದರೂ ಈಗ ನಮ್ಮದೇ ಚೂಟಿಯ ಸರ್ಜರಿಗೆ ಸಹಾಯಕನಾಗಿ ಅಪ್ಪ ಕೈಗೆ ಗ್ಲೌಸ್ ತೊಟ್ಟು ಫೋರ್ಸೆಪ್ಸ್ ಹಿಡಿದು ನಿಲ್ಲುವ ಅನಿವಾರ್ಯ ಸ್ಥಿತಿ ಬಂದಿತ್ತು. ಅಮ್ಮ ಕಷ್ಟಪಟ್ಟುಕೊಂಡೇ ಅದರ ಕಾಲು ಮೇಲೆತ್ತಿ ಹಿಡಿದು ನಿಂತು ಸರ್ಜರಿಗೆ ಸಹಕರಿಸಿದಳು. ಡಾಕ್ಟರ್ ಗಂಟನ್ನು ಬಿಡಿಸುತ್ತಾ ಹೋದ ಹಾಗೆಲ್ಲಾ ಒಸರುತ್ತಿದ್ದ ರಕ್ತವನ್ನು ಅಪ್ಪ ಹತ್ತಿಯಲ್ಲಿ ಒರೆಸುತ್ತಾ ಹೋದರು. ಸುಮಾರು ಒಂದು ಗಂಟೆಯ ಪ್ರಯತ್ನದ ನಂತರ ಡಾಕ್ಟರ್ ಯಶಸ್ವಿಯಾಗಿ ಆ ಗಂಟನ್ನು ಈಚೆ ತೆಗೆದರು! ಅಪ್ಪನ ಮುಖದ ತುಂಬಾ ಬೆವರ ಹನಿಗಳು.

ಆಸ್ಪತ್ರೆಯಿಂದ ಬಂದ ತಕ್ಷಣವೇ ಚೂಟಿ ಎಂದಿನಂತೆ ಓಡಾಡಲು ಪ್ರಯತ್ನಿಸಿ ವಿಫಲ ಆಯಿತು. ಇನ್ನೂ ಅರಿವಳಿಕೆ ಪ್ರಭಾವ ಇದ್ದ ಕಾರಣ ಎರಡು ಮೂರು ಹೆಜ್ಜೆ ಹಾಕಿ ಕುಸಿದು ಬೀಳುತ್ತಿತ್ತು. ಅರಿವಳಿಕೆ, ಆಂಟಿಬಯೋಟಿಕ್, ಪೈನ್ ಕಿಲ್ಲರ್ ಎಂದು ಮೂರು ನಾಲ್ಕು ಇಂಜೆಕ್ಷನ್ ಚುಚ್ಚಿದ್ದರು. ಪಾಪ! ಅದಕ್ಕೆ ಎಷ್ಟು ನೋವಾಗಿತ್ತೋ ಏನೋ? ಮರುದಿನ ಚೇತರಿಸಿಕೊಂಡಿತು. ಒಂದೆರಡು ದಿನಗಳಲ್ಲಿ ಗಾಯವೂ ಮಾದ ಸೂಚನೆ ಸಿಕ್ಕಿತು.

ಎಲ್ಲಾ ಸರಿಹೋಯಿತು ಎನ್ನುವ ಹೊತ್ತಿಗೆ ಗಾಯ ಇನ್‌ಫೆಕ್ಷನ್ ಆಗಿದೆ ಎಂದು ತಿಳಿಯಿತು. ಚೂಟಿ ಮಂಕಾಗಿ ಮಲಗಿಬಿಟ್ಟಿತು. ಈ ಬಾರಿ ಡಾ. ನೀಲಕಂಠಪ್ಪನವರು ಬಂದು ಉಪಚರಿಸಿ ಹೊಸ ಬ್ಯಾಂಡೇಜ್ ಕಟ್ಟಿಹೋದರು. ಬೆಳಿಗ್ಗೆ ಎದ್ದಾಗ ಒಂದು ಆಘಾತ ಕಾದಿತ್ತು. ಮನೆಯೆಲ್ಲಾ ಹುಡುಕಿದರೂ ಚೂಟಿ ಕಾಣಲಿಲ್ಲ. ಎಲ್ಲೆಡೆ ಹುಡುಕಿ ನಿರಾಶರಾದೆವು. ನಮ್ಮ ಅದೃಷ್ಟವೋ ಚೂಟಿಯ ಅದೃಷ್ಟವೋ ಅಂದು ಸಂಜೆ ವೇಳೆಗೆ ವಾಪಸ್ ಬಂತು. ನಮ್ಮ ಸಂಭ್ರಮ ಹೇಳತೀರದು...

ಈಗ ಚೂಟಿ ಸುಧಾರಿಸಿಕೊಳ್ಳುತ್ತಿದೆ. ದಿನದ ಬಹುಪಾಲು ಸಮಯವನ್ನು ಅಮ್ಮ ಈ ಚೂಟಿ ಉಪಚಾರಕ್ಕೇ ಮೀಸಲಿಟ್ಟಿದ್ದಾಳೆ. ಅಂದಹಾಗೆ, 11 ವರ್ಷಗಳಿಂದ ನಮ್ಮೊಂದಿಗಿರುವ ಚೂಟಿ ತುಂಬಾ ನಿಯತ್ತಿನದು. ಅದು ಸೋಫಾ–ಹಾಸಿಗೆ ಹತ್ತುವುದಿಲ್ಲ, ಮನೆಯಲ್ಲಿ ಗಲೀಜು ಮಾಡುವುದಿಲ್ಲ, ಉಪವಾಸ ಇರುತ್ತದೆಯೇ ಹೊರತು ಏನನ್ನೂ ಕದ್ದು ತಿನ್ನುವುದಿಲ್ಲ. ಮಕ್ಕಳಿಗೂ ಗುರ್ ಅಂದ ಉದಾಹರಣೆ ಇಲ್ಲ. ಇಂಥ ಹೃದಯವಂತ ಚೂಟಿಯ ಮೇಲೆ ಯಾರಿಗೆ ತಾನೇ ಪ್ರೀತಿ ಇಲ್ಲದಿರಲು ಸಾಧ್ಯ? ■


